No. of Printed Pages : **2**

# 46101

**B.Sc./G.M.T./B.C.A. I Semester Degree Examination, March/April - 2023**

**BASIC KANNADA**

**Paper No. 01 : ವಿಜ್ಞಾನ ವಿಜಯ – 01**

**(NEP)**

Time : 2 Hours | Maximum Marks : 60

**ಸೂಚನೆ :** ಭಾಷೆ ಮತ್ತು ಬರಹದ ಶುದ್ಧಿಗೆ ಗಮನ ಕೊಡಲಾಗುವುದು.

**ವಿಭಾಗ – ಎ**

ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಉತ್ತರಿಸಿರಿ. **10x1=10**

**1.** (a) ಕನ್ನಡದ ಆದಿಕವಿ – ಎಂದು ಯಾರನ್ನು ಕರೆಯುತ್ತಾರೆ ?

(b) "ಕನ್ನಡದ ಕಣ್ವ" – ಎಂದು ಪ್ರಸಿದ್ಧರಾದ ಕವಿ ಯಾರು ?

(c) ಭೂಮಿಗೀತ – ಪದ್ಯವನ್ನು ಬರೆದ ಕವಿ ಯಾರು ?

(d) "ಭೂಮಿ ಮಾನವನ ಪಿತ್ರಾರ್ಜಿತ ಆಸ್ತಿಯಲ್ಲ" – ಈ ಹೇಳಿಕೆಯನ್ನು ನೀಡಿದವರು ಯಾರು ?

(e) ಡಾ. ಸಿದ್ಧಲಿಂಗಯ್ಯನವರ ಆತ್ಮಕಥೆ ಯಾವುದು ?

(f) ಶ್ರೀ. ವಿ. ವೀರಪ್ಪನವರ ಕಾವ್ಯನಾಮ ಯಾವುದು ?

(g) ನಾನೊಬ್ಬ ಕನ್ನಡ ಬಂಟರ ಬಂಟ ಎಂದು ತಮ್ಮನ್ನು ತಾವೇ ಕನ್ನಡದ ನುಡಿ ಸೇವಕ ಎಂದು ಕರೆದುಕೊಂಡ ಹೋರಾಟಗಾರ ಯಾರು ?

(h) ತೀ.ನಂ.ಶ್ರೀ. ಯವರ ಪೂರ್ಣ ಹೆಸರೇನು ?

(i) ಮಹಾತ್ಮ ಗಾಂಧೀಜಿಯವರ ಆತ್ಮಕಥೆಯ ಹೆಸರೇನು ?

(j) "ಸಮಾಜವಾದ ಶುದ್ಧ ಸಮಾಜದೆಡೆಗೆ" – ಎಂಬ ಲೇಖನದ ಮೂಲ ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡಿದ ಲೇಖಕರು ಯಾರು ?

**ವಿಭಾಗ – ಬಿ**

ಕೆಳಗಿನ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿರಿ. **4x5=20**

**2.** ನಿತ್ಯೋತ್ಸವ – ಕವನದ ಆಶಯವನ್ನು ಬರೆಯಿರಿ.

**3.** 'ಸ್ತ್ರೀ' – ಕವಿತೆಯು ತಾಯ್ತನದ ಆರಾಧನೆ ವಿಶ್ವರೂಪವನ್ನು ಕುರಿತು ಹಿಡಿದಿಡಲು ಪ್ರಯತ್ನಿಸುತ್ತಿದೆ ಎಂಬುದನ್ನು – ಸ್ತ್ರೀ ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿರಿ.

4. ಸುಟ್ಟಾವು ಬೆಳ್ಳಿಕಿರಣ – ಕವಿತೆಯಲ್ಲಿ ಹೆಣ್ಣಿನ ಬಗೆಗಿನ ಕಾಳಜಿಯ ಔದಾರ್ಯವು ವ್ಯಕ್ತವಾದ ರೀತಿಯನ್ನು ಕುರಿತು ವಿವರಿಸಿರಿ.

5. ಲಿಂಗ ತಾರತಮ್ಯವನ್ನು ತೊಡೆದುಹಾಕಿ ಏಕತಾನತೆಯಿಂದ ಸಮಾನತೆಯನ್ನು ತರುವ ಅಂಶಗಳು "ಸ್ತ್ರೀವಾದಿ ತತ್ವ"– ಲೇಖನದಲ್ಲಿ ವ್ಯಕ್ತವಾದ ರೀತಿಯನ್ನು ವಿವರಿಸಿರಿ.

6. ಸತ್ಯಾಗ್ರಹ ಮತ್ತು ಸರ್ವೋದಯದ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವನ್ನು ವಿವರಿಸಿರಿ.

7. ನೀರು ಇಲ್ಲದ ಜಳಕ – ಈ ತತ್ವ ಪದದಲ್ಲಿ ವ್ಯಕ್ತವಾದ ನಿಜಭಕ್ತಿಯ ವಿಶ್ಲೇಷಣೆಯನ್ನು ಕುರಿತು ಬರೆಯಿರಿ.

**ವಿಭಾಗ – ಸಿ**

ಕೆಳಗಿನ **ಯಾವುದಾದರೂ ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **3x10=30**

8. ಕೃಷಿಕ ವಿಜ್ಞಾನಿಯೊಬ್ಬ ಪಾಪಿಯಾಗಿ ಕೊನೆಗೆ ಆತನನ್ನು ಪರಿವರ್ತನೆಯ ಬಿಂದುವಿನಲ್ಲಿ ನಿಲ್ಲಿಸುವ ಸಂಗತಿಯನ್ನು "ಉರಿಯ ನಡಿಗೆ" ಕಥೆಯ ಹಿನ್ನೆಲೆಯಲ್ಲಿ ವಿವರಿಸಿರಿ.

9. ಪರಿಸರ ರಕ್ಷಣೆಯ ಕುರಿತು "ಇರುವುದೊಂದೆ ಭೂಮಿ"– ಲೇಖನದಲ್ಲಿ ವ್ಯಕ್ತವಾದ ನಾಗೇಶ ಹೆಗಡೆಯವರ ಕಾಳಜಿಯನ್ನು ಕುರಿತು ವಿವರಿಸಿರಿ.

10. ದೇವದಾಸಿಯರ ಬದುಕನ್ನು ಹೂವುಗಳ ಹೆಸರಿನಲ್ಲಿ ರೂಪಕವಾಗಿ "ಬೇಲಿಯ ಹೂಗಳು" ಕವನ ಪ್ರತಿನಿಧಿಸಲ್ಪಡುತ್ತದೆ ಎಂಬುದನ್ನು ವಿವರಿಸಿರಿ.

11. ಕಾಲಮಾನಕ್ಕನುಗುಣವಾಗಿ ವಕ್ಕರಿಸುವ ನೆಗಡಿ ಕಾಯಿಲೆ ನಿರಂತರ ಬದುಕಿನ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತದೆ ಎಂಬುದನ್ನು ತೀ.ನಂ.ಶ್ರೀ. ಯವರ ನೆಗಡಿ ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

12. ಸಮಾಜವಾದದ ಬೆಳವಣಿಗೆಯನ್ನು ಎರಿಕ್‌ಪ್ರಾಂ ರವರ ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

-o0o-